# ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿಗಳು ವಿಭಾಗದ ಕಾರ್ಯವ್ಯಾಪ್ತಿಯನ್ನು ವಿಶೇಷ ಆಯುಕ್ತರು (ಕಂದಾಯ) ರವರ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

--------

**ಪ್ರಸ್ತಾವನೆ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿಗಳು ವಿಭಾಗದ ಕಾರ್ಯ ಚಟುವಟಿಕೆಗಳನ್ನು ಪ್ರಸ್ತುತ ವಿಶೇಷ ಆಯುಕ್ತರು (ತೋಟಗಾರಿಕೆ / ಅರಣ್ಯ / ಕೆರೆಗಳು / ಶಿಕ್ಷಣ) ರವರ ಅಧೀನದಲ್ಲಿ ನಿರ್ವಹಿಸಲಾಗುತ್ತಿರುತ್ತದೆ. ಪಾಲಿಕೆಯ ಆಸ್ತಿಗಳ ಮೇಲ್ವಿಚಾರಣೆ / ನಿರ್ವಹಣೆ / ಗುತ್ತಿಗೆ ನೀಡುವ ಕಾರ್ಯ / ಬಾಡಿಗೆ ವಸೂಲಿ ಮಾಡುವ ಕಾರ್ಯ ಮತ್ತು ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದ ಇತರೆ ಕೆಲಸ ಕಾರ್ಯಗಳನ್ನು ಕಂದಾಯ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವುದರಿಂದ ಮತ್ತು ವಲಯ ಮಟ್ಟದಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಈ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಆಸ್ತಿಗಳು ವಿಭಾಗದ ಕಾರ್ಯವ್ಯಾಪ್ತಿಯನ್ನುಕಂದಾಯ ಇಲಾಖೆಯ ಅಧೀನಕ್ಕೆ ತರುವುದು ಸೂಕ್ತವೆಂದು ಅಭಿಪ್ರಾಯಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ**

**ಸಂಖ್ಯೆ: ಬಿ12(1ಬಿ)/ಪಿ.ಆರ್/16/2023-24** **ದಿನಾಂಕ:** 29.11.23

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತುತ ವಿಶೇಷ ಆಯುಕ್ತರು (ತೋಟಗಾರಿಕೆ / ಅರಣ್ಯ / ಕೆರೆಗಳು / ಶಿಕ್ಷಣ) ರವರ ಅಧೀನದಲ್ಲಿ ನಿರ್ವಹಿಸಲಾಗುತ್ತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿಗಳು ವಿಭಾಗದ ಕಾರ್ಯ ಚಟುವಟಿಕೆಗಳನ್ನು ದಿನಾಂಕ: 01-12-2023ರಿಂದ ಜಾರಿಗೆ ಬರುವಂತೆ ವಿಶೇಷ ಆಯುಕ್ತರು (ಕಂದಾಯ) ರವರ ವ್ಯಾಪ್ತಿಗೆ ಒಳಪಡಿಸಿ ಆದೇಶಿಸಿದೆ. ಇದರನ್ವಯ ಆಸ್ತಿಗಳ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳು ಮತ್ತು ಇತರೆ ವ್ಯವಹರಣೆಗಳನ್ನು ವಿಶೇಷ ಆಯುಕ್ತರು (ಕಂದಾಯ) ರವರ ಮುಖಾಂತರ ನಿರ್ವಹಿಸಲು ಆಸ್ತಿಗಳು ವಿಭಾಗದ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ನಿರ್ದೇಶಿಸಿದೆ.

ಮೇಲ್ಕಂಡ ಆದೇಶದಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವುದು.

29/11

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
29/11/23

**ಪ್ರತಿಯನ್ನು:**

ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
ಮಾನ್ಯ ವಿಶೇಷ ಆಯುಕ್ತರು (ಆಡಳಿತ) / (ಕಂದಾಯ) / (ಮಾಹಿತಿ ತಂತ್ರಜ್ಞಾನ) / (ಆಸ್ತಿಗಳು) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಕಳುಹಿಸಿದೆ.
ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-1), ವಿಕಾಸ ಸೌಧ, ಬೆಂಗಳೂರು ರವರಿಗೆ ಕಳುಹಿಸಿದೆ.
ಮು.ಲೆ.ಅ / ಮು.ಲೆ.ಪ / ಉ.ನಿ (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ.
ಸದರಿ ಅಧಿಕಾರಿಯವರಿಗೆ / ಕಛೇರಿ ಪ್ರತಿ



Generated from eOffice by MANJUNATHA V, BBMP-DCIO(MNV)I/C, DEPUTY CHIEF INFORMATION OFFICER (IT), BRUHAT BENGALURU MAHANAGARA PALIKE on 12/02/2025 04
Scanned by Scanner Go